**ಓ.ಎಸ್ ನಂಃ *81* /2021**

**ಪಿ .ಡಬ್ಲು-*2***

ಸಾಕ್ಷಿಯನ್ನು ದಿನಾಂಕಃ 10.06.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿ ಪರ ಶ್ರೀ. ಪಿ ಎಂ ಎಸ್ ವಕೀಲರಿಂದ**

ಸಾಕ್ಷಿಗೆ ಕನ್ನಡ ಬಾಷೆ ಬರದೇ ಇರುವುದರಿಂದ ಕುಮಾರಿ ಡಿ ಎನ್ ವಕೀಲರನ್ನು ಬಾಷಾಂತರರನ್ನಾಗಿ ನೇಮಕ ಮಾಡಲಾಯಿತು.

ನಾನು ವ್ಯವಸಾಯ ಮಾಡುತ್ತೇನೆ. ಈ ದಾವಾ ವನ್ನು ಯಾರು ಹಾಕಿರುತ್ತಾರೆ ಎಂದರೆ ವಾದಿಯರು ಸುಬ್ರಮಣಿ ಹಾಗೂ ಅವರ ಕುಟುಂಬದವರ ವಿರುದ್ಧ ಹಾಕಿರುತ್ತಾರೆ. ಪ್ರತಿವಾದಿಗಳು ವಾದಿಯರ ಕುಟುಂಬದ ಸದಸ್ಯರು ಅಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ವಂಶವೃಕ್ಷವನ್ನು ನೋಡಿರುತ್ತೀರಾ ಎಂದರೆ ಹೌದು. ವಾದಿಯರು ನೀಡಿರುವ ವಂಶವೃಕ್ಷದಲ್ಲಿ ಪ್ರತಿವಾದಿಗಳ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 13 ರಲ್ಲಿ ಪ್ರತಿವಾದಿಗಳ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ರುವ ಹೆಸರುಗಳು ಪ್ರತಿವಾದಿಗಳ ಹೆಸರು ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು ಎಂದು ತೋರಿಸಲು ಪಡಿತರ ಚೀಟಿ , ಚುನಾವಣೆ ಗುರುತಿನ ಚೀಟಿ ಹಾಗೂ ವಾಸಸ್ಥಳ ದೃಡೀಕೃತ ಪತ್ರಗಳನ್ನು ನೀಡಿಲ್ಲದಿದ್ದರೂ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗಳು ಎಷ್ಟು ಅಸ್ತಿಗಳ ಮೇಲೆ ದಾವಾ ಹೂಡಿರುತ್ತಾರೆ ಎಂದರೆ 4 ಅಸ್ತಿಗಳ ಮೇಲೆ ಹಾಕಿರುತ್ತಾರೆ. ಅದರ ಸರ್ವೆ ನಂಬರುಗಳು 35, 37, 40 ಮತ್ತು 41 ಅಗಿರುತ್ತದೆ. ಸದರಿ ಸ್ವತ್ತುಗಳು ವಾದಿಗಳಿಗೆ ಹೇಗೆ ಬಂದಿರುತ್ತದೆ ಎಂದರೆ ದಾವಾ ಆಸ್ತಿಗಳು ಗೋಪಾಲಪ್ಪನವರಿಗೆ ಮರು ಮಂಜೂರಾಗಿದ್ದು , ದೊಡ್ಡ ವೆಂಕಟಪ್ಪ ರವರು ತೋಟಿ ಮುನಿವೆಂಕಟಪ್ಪ ನವರಿಗೆ ವಿಭಾಗದ ಮೂಲಕ ನೀಡಿರುತ್ತಾರೆ. ದೊಡ್ಡ ವೆಂಕಟಪ್ಪ ಮತ್ತು ತೋಟಿ ಮುನಿವೆಂಕಟಪ್ಪ ನವರಿಗೆ ಯಾವ ಯಾವ ಅಸ್ತಿಗಳು ಬಂದಿರುವ ಬಾಗ ಪಟ್ಟಿಯನ್ನು ನೋಡಿರುತ್ತೀರಾ ಎಂದರೆ ಹೌದು. ಗೋಪಾಲಪ್ಪನವರು ತೋಟಿ ಮುನಿವೆಂಕಟಪ್ಪನವರಿಗೆ ಸರ್ವೆ ನಂಬರುಗಳು 37, 38 ಮತ್ತು 40, 41 ರಲ್ಲಿ ಭಾಗ ನೀಡಿರುತ್ತಾರೆ.

ಸರ್ವೆ ನಂ 37 ರಲ್ಲಿ 1 ಎಕರೆ 7 ಗುಂಟೆ ಇರುತ್ತದೆ. ಸದರಿ ಆಸ್ತಿಯನ್ನು 3 ಭಾಗಗಳನ್ನು ಮಾಡಿರುತ್ತಾರೆ. ಗೋಪಾಲಪ್ಪ , ದೊಡ್ಡವೆಂಕಟಪ್ಪ ಮತ್ತು ತೋಟಿ ಮುನಿವೆಂಕಟಪ್ಪನವರಿಗೆ 3 ಭಾಗ ಮಾಡಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

***ಓದಿ ಹೇಳಿ ಕೇಳಿ ಸರಿ ಇದೆ,***

***ಸಹಿ/-***

***(ಹರೀಶ್. ಜಿ )***

***ಪ್ರಧಾನ ಸಿವಿಲ್ ನ್ಯಾಯಾಧೀಶರು,***

***ಮತ್ತು ಜೆಎಂಎಫ್ ಸಿ, ಮುಳಬಾಗಿಲು***